ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರಃ 390/2018
ಡಿಡಬ್ಲ್ಯೂ : 2

ದಿನಾಂಕಃ 28-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ ಶ್ರೀ ಟಿ ಬಿ ಎಸ್ ವಕೀಲರಿಂದಃ

1.ಈ ಕೇಸಿನಲ್ಲಿ ಒಳಗೊಂಡಿರುವ ಭೂಮಿಯನ್ನು ನಾನು ನೋಡಿರುತ್ತೇನೆ. ಅದು ಕೃಷಿ ಭೂಮಿ ಇರುತ್ತದೆ. ಆಗೆಲ್ಲಾ ಗದ್ದೆ ಇತ್ತು. 50 ಸೆಂಟ್ಸ್ ಜಾಗ ಇರುತ್ತದೆ. ನಮ್ಮ ಮನೆ ಆ ಭೂಮಿಯಿಂದ 2 ಕಿ.ಮೀ ದೂರ ಇರುತ್ತದೆ.ನಾನು ಕೂಲಿ ಕೆಲಸ ಮಾಡುತ್ತಿರುತ್ತೇನೆ. ಚಂದು ಹಾಂಡರವರಿಗೆ ಒಂದು ಹೆಣ್ಣು 5 ಜನ ಗಂಡು ಮಕ್ಕಳು. ಅವರುಗಳ ಹೆಸರು ಗೊತ್ತಿರುವುದಿಲ್ಲ. ಅವರು ಎಲ್ಲಿ ಇರುತ್ತಾರೆ ಎಂದು ಗೊತ್ತಿರುವುದಿಲ್ಲ. ಈಗ ಎಲ್ಲಿ ಇರುತ್ತಾರೆ ಎಂದು ಗೊತ್ತಿರುವುದಿಲ್ಲ. ನಾನು ಆ ಹುಡುಗರ ಮನೆಗೆ ಕೆಲಸಕ್ಕೆ ಹೋಗಿರುವುದಿಲ್ಲ.

2. ಚಂದು ಹಾಂಡ್ತಿರವರ ಮನೆಗೆ ಕೆಲಸಕ್ಕೆ ಹೋಗಿರುವುದಿಲ್ಲ. ಅಕ್ಕಯ್ಯರವರ ಮನೆಗೆ ಕೆಲಸಕ್ಕೆ ಹೋಗಿರುವುದಿಲ್ಲ. ಅವರಿಗೆ ಎಷ್ಟು ಆಸ್ತಿ ಇದೆ, ಎಲ್ಲಿ ಇರುತ್ತದೆ, ಎಷ್ಟು ಇರುತ್ತದೆ ಎಂದು ಗೊತ್ತಿರುವುದಿಲ್ಲ. ಆ ಆಸ್ತಿ ಅವರಿಗೆ ಹೇಗೆ ಬಂದಿರುತ್ತದೆ ಎಂದು ಗೊತ್ತಿರುವುದಿಲ್ಲ. ಚಂದು ಹಾಂಡ್ತಿ ಹಾಗೂ ಅವರ ಮಕ್ಕಳ ನಡುವೆ ಒಳಗೆ ಆದ ದಾಖಲೆಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಉಳಿದ ಆಸ್ತಿ ಗದ್ದೆಯೋ ಹಾಡಿಯೋ ಎಂದು ಗೊತ್ತಿರುವುದಿಲ್ಲ. 50 ಸೆಂಟ್ಸ್ ಜಾಗದ ಸುತ್ತಮುತ್ತ ಯಾವ ಜಾಗ ಇರುತ್ತದೆ ಎಂದು ಗೊತ್ತಿರುವುದಿಲ್ಲ. ಆ ಜಾಗವನ್ನು ನಾನು ನೋಡಿರುವುದಿಲ್ಲ.

3. ಚಂದು ಹಾಂಡ್ತಿರವರು ನೀರುಮನೆ, ಆಜ್ರಿ ಗ್ರಾಮದಲ್ಲಿ ಇದ್ದರು. ನಾನು ಅವರ ಮನೆಗೆ ಹೋಗಿರುವುದಿಲ್ಲ. ನನಗೆ ಅವರ ಪರಿಚಯ ಇರುತ್ತದೆ. ಅವರು ನಮ್ಮ ಮನೆಯ ಹತ್ತಿರದ ಅಂಗಡಿಗೆಲ್ಲಾ ಬರುತ್ತಿದ್ದರು. ವಿಲ್ ನ್ನು ನಾಗಭೂಷಣ್ ಭಟ್‌ರವರ ಮನೆಯಲ್ಲಿ ಬರೆಯುತ್ತೇನೆ ಎಂದು ಹೇಳಿದ್ದರು. ಆಗ ನಾಗಭೂಷಣ್ ಭಟ್ ಹಾಗೂ ಚಂದು ಹಾಂಡ್ತಿ ಇದ್ದರು. ನಾಗಭೂಷಣ್ ಭಟ್‌ರವರ ಮನೆ ಕಮಲಶಿಲೆ ಅಗ್ರಹಾರದಲ್ಲಿ ಇರುತ್ತದೆ. ನಮ್ಮ

ಮನೆಯಿಂದ ಅವರ ಮನೆಗೆ ಅರ್ಧ  ಕಿ.ಮೀ ಇರುತ್ತದೆ. ನನಗೆ ನಾಗಭೂಷಣ್ ಭಟ್ ರವರ ಮನೆಗೆ ಬರಲು ಹೇಳಿದ್ದು ಚಂದು ಹಾಂಡ್ತಿ. ಈ ವಿಷಯದಲ್ಲಿ ನಾನು ಅವರ ಮನೆಗೆ ಒಂದೇ ಬಾರಿ ಹೋಗಿರುತ್ತೇನೆ. ನಾನು ಹೋದಾಗ ಎಲ್ಲಾ ಬರೆದು ಆಗಿತ್ತು. ಆ ವಿಲ್ ನ್ನು ಬರೆಯಲು ಹೇಳಿದ ಸಂದರ್ಭ ನಾನು ಇರಲಿಲ್ಲ. ಬೆಳಿಗ್ಗೆ 9 ಗಂಟೆಗೆ ನಾಗಭೂಷಣ್ ಭಟ್ ಹೋಗಿದ್ದೆ. ಚಂದು ಹಾಂಡ್ತಿ ಮೊದಲೇ ಅಲ್ಲಿ ಇದ್ದರು. ನಾಗಭೂಷಣ್ ಭಟ್ ರವರ ಮನೆಯಲ್ಲಿ  ಕಾಲು ಗಂಟೆಯಿಂದ ಅರ್ಧ ಗಂಟೆ ಇದ್ದೆ. ನಾನು ಹೋದ ಕೂಡಲೇ ಇಲ್ಲಿ ದಸ್ಕತ್ ಹಾಕಿ ಎಂದು ಹೇಳಿರುತ್ತಾರೆ. ನಾನು ಹೋಗುವಷ್ಟರಲ್ಲಿ ವಿಲ್ ಬರೆದು ಆಗಿತ್ತು.

4. ನಾಗಭೂಷಣ್ ಭಟ್ ರವರ ಮನೆಯಲ್ಲಿ ಆಗ ಇನ್ನೊಬ್ಬರು ಚಿಕ್ಕಮ್ಮ ಶೆಡ್ತಿ ಇದ್ದರು. ಬೇರೆ ಯಾರು ಇರಲಿಲ್ಲ. ಅವರನ್ನು ಅವರ ಗಂಡು ಮಕ್ಕಳು ಕರೆದುಕೊಂಡು ಬಂದಿದ್ದರು. ನಾನು ವಿಲ್ ನ ವಿಚಾರವನ್ನು ಗಂಡು ಮಕ್ಕಳಿಗೆ ಹೇಳಿದ್ದೀರಾ ಎಂದು ಅವರಲ್ಲಿ ಕೇಳಿರುವುದಿಲ್ಲ. ಚಂದು ಹಾಂಡ್ತಿರವರು ಸಹಿ ಮಾಡಿರುವುದಿಲ್ಲ, ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ. ನಮ್ಮ ಮನೆಯಿಂದ  ಶಂಕರನಾರಾಯಣಕ್ಕೆ 10 ಕಿ.ಮೀ ಅಂತರ ಇರುತ್ತದೆ. ಆ ವಿಲ್ ರಿಸ್ತ್ರೀ ಆಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಅಕ್ಕಯ್ಯ ಹಾಂಡ್ತಿರವರು ನನಗೆ ಸಿಕ್ಕಿರುವುದಿಲ್ಲ. ಈವರೆಗೂ ಸಿಕ್ಕಿರುವುದಿಲ್ಲ. ನಾನು ಅವರ ಮನೆಗೆ ಹೋಗಿರುವುದಿಲ್ಲ. ಶಾಲೆಗೆ ಬರುವಾಗ ನೋಡಿರಬಹುದು.

5. ಈ ದಿನ ನ್ಯಾಯಲಯಕ್ಕೆ  ಬರಲು ಅಕ್ಕಯ್ಯನ ಮಗಳು  ನಮ್ಮ ಮನೆಗೆ ಹಾಲನ್ನು ತೆಗೆದುಕೊಂಡು ಬರಲು ಬಂದಿರುತ್ತಾರೆ, ಆಗ ಅವಳು ಹೇಳಿರುತ್ತಾಳೆ.  ಚಂದು ಹಾಂಡ್ತಿ ಆ ರೀತಿಯ ವಿಲ್ ನಾಮೆ ಬರೆದಿದ್ದು ಇಲ್ಲ , ನನಗೆ ಅವರ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ನಾಗಭೂಷಣ್ ಭಟ್,  ಅಕ್ಕಯ್ಯ ಸೇರಿ ಒಂದು ವಿಲ್ ನಾಮೆ ತಯಾರಿಸಿದ್ದು ನಾನು ನಾಗಭೂಷಣ್ ರವರ ಒತ್ತಾಯದ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ದಿನ ನ್ಯಾಯಲಯದಲ್ಲಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ                    ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ